**ಓ ಎಸ್ ನಂಃ 98/2017**
**ಡಿ ಡಬ್ಲ್ಯೂ ಃ 1**

**ದಿಃ 07.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ. ಕೆ ಆರ್ ವಕೀಲರಿಂದಃ-**

ತಾವು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ನಿಡಿ 1 ರ ಮ್ಯುಟೇಷನ್ ರಿಜಿಸ್ಟರ್ ನಲ್ಲಿ ಸರ್ವೆ ನಂ. 31, 33/2, ಮತ್ತು ಸರ್ವೆ ನಂ. 33/3 ರ ಜಮೀನುಗಳಿಗೆ ಸಂಬಂಧಪಟ್ಟಂತೆ ವಿಭಾಗ ಆಗಿದೆಯಾ ಎಂದರೆ ಸಾಕ್ಷಿಯು ವಿಭಾಗ ಆಗಿದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ 3 ನೋಂದಾಯಿತ ಕ್ರಯ ಪತ್ರಗಳ ದೃಢೀಕೃತ ನಕಲುಗಳನ್ನು ತೋರಿಸಲಾಗಿದ್ದು ಸಾಕ್ಷಿಯು ಸದರಿ ದಾಖಲಾತಿಗಳನ್ನು ನೋಡಿ ಒಪ್ಪಿದ್ದು ಸದರಿ ದಾಖಲಾತಿಗಳನ್ನು ಸಾಕ್ಷಿಯ ಒಪ್ಪಿಗೆಯ ಮೇರೆಗೆ ಅವುಗಳನ್ನು ಕ್ರಮವಾಗಿ **ನಿಪಿ 36 ರಿಂದ ನಿಪಿ 38** ಎಂದು ಗುರುತಿಸಲಾಯಿತು. ನಿಡಿ 1 ಮ್ಯುಟೇಷನ್ ಲ್ಲಿ ಸಹ ನಿಪಿ 36 ರಿಂದ 38 ರ ದಾಖಲಾತಿಗಳ ಬಗ್ಗೆ ನಮೂದು ಇಲ್ಲ ಎಂದರೆ ಸರಿಯಲ್ಲ. ನನ್ನ ತಾತನವರಾದ ಚಿಕ್ಕಣ್ಣನವರಿಗೆ ಸಹ ದಾವಾ ಸ್ವತ್ತುಗಳಲ್ಲಿ ಹಿಸ್ಸೆ ಆಗಿತ್ತಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಚಿಕ್ಕಣ್ಣನವರಿಗೆ ಒಂದೇ ಸರ್ವೆ ನಂ. ನಲ್ಲಿ 20 ಗುಂಟೆ ಜಮೀನು ಅವರ ಭಾಗಕ್ಕೆ ಹೋಗಿತ್ತು ಆದರೆ ನನಗೆ ಈಗ ಸರ್ವೆ ನಂ. ನೆನಪಿಲ್ಲ. ಚಿಕ್ಕಣ್ಣನವರ ಹಿಸ್ಸೆಗೆ ಬಂದಿರುವ ಜಮೀನು ಈಗ ಏನು ಆಗಿದೆ ಎಂದರೆ ಸಾಕ್ಷಿಯು ವಾದಿಯ ಹಿಸ್ಸೆಗೆ ಹೋಗಿರುತ್ತದೆ. ಸದರಿ ವಿಚಾರಕ್ಕೆ ಸಂಬಂಧಪಟ್ಟಂತೆ ದಾಖಲಾತಿ ಇದೆ. ಸದರಿ ದಾಖಲಾತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ. ಚಿಕ್ಕಣ್ಣನವರ ಮರಣದ ನಂತರ ಅವರಿಗೆ ಸೇರಿರುವ ಆಸ್ತಿಗಳಿಗೆ ಸಂಬಂಧಪಟ್ಟಂತೆ ಪ್ರಸ್ತುತ ದಾವೆಯನ್ನು ವಾದಿ ಸಲ್ಲಿಸಿದ್ದಾರೆ ಎಂದರೆ ಸರಿ. ಸಾಕ್ಷಿಯು ಸ್ವತಃ ಮುಂದುವರೆದು ನಾವು ಕ್ರಯಕ್ಕೆ ಪಡೆದಿರುವ ಸ್ವತ್ತುಗಳನ್ನು ಸಹ ಸೇರಿಸಿ ಈ ದಾವೆಯನ್ನು ವಾದಿ ಹೂಡಿರುತ್ತಾರೆ. ನಾವು ಕ್ರಯಕ್ಕೆ ಪಡೆದಿರುವ ಸರ್ವೆ ನಂ. 104. ಸದರಿ ಜಮೀನಿಗೆ ಸಂಬಂಧಪಟ್ಟಂತೆ ಕ್ರಯ ಪತ್ರವನ್ನು ಏನಾದರೂ ಹಾಜರುಪಡಿಸಿದ್ದೀರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ತಾವು ಕ್ರಯಕ್ಕೆ ಪಡೆದಿರುವ ಸ್ವತ್ತನ್ನು ಸಹ ಈ ದಾವೆಯಲ್ಲಿ ಸೇರಿಸಿದ್ದಾರೆ ಎಂದು ತಮ್ಮ ಲಿಖಿತ ಹೇಳಿಕೆಯಲ್ಲಿ ಹೇಳಲು ತಮಗೆ ತೊಂದರೆ ಇತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. 5 ಮತ್ತು 6 ನೇ ಪ್ರತಿವಾದಿಗಳಿಗೆ ದಾವಾ ಸ್ವತ್ತಿನಲ್ಲಿ ಭಾಗ ಕೊಟ್ಟಿದ್ದೀರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ತಮ್ಮ ಪ್ರಕಾರ ಭಾಗ ಆಗಿದೆ ಎಂದು ಹೇಳಿದ್ದೀರಿ ತಮ್ಮ ಭಾಗಕ್ಕೆ ಎಷ್ಟು ವಿಸ್ತೀರ್ಣ ಬಂದಿದೆ ಎಂದರೆ ಸಾಕ್ಷಿಯು 21

ಎಕರೆ ಬಂದಿದೆ ಎಂದು ನುಡಿಯುತ್ತಾರೆ. ತಮ್ಮ ಪ್ರಕಾರ ವಿಭಾಗ ಆಗಿದೆ ಎಂದಾದರೆ ವಾದಿಯ ಭಾಗಕ್ಕೆ ಎಷ್ಟು ಎಕರೆ ಜಮೀನು ಹೋಗಿದೆ ಎಂದರೆ ನನಗೆ ಗೊತ್ತಿಲ್ಲ. ತಮ್ಮ ತಮ್ಮ ಅನುಕೂಲಕ್ಕೆ ತಕ್ಕಂತೆ ತಾವು 20 ಎಕರೆಯ ಜಮೀನಿನಲ್ಲಿ ಸ್ವಾಧೀನಾನುಭವದಲ್ಲಿದ್ದು ಅದೇ ರೀತಿ ವಾದಿಯು ವಾದಿಯು 4 ರಿಂದ 5 ಎಕರೆ ಜಮೀನಿನಲ್ಲಿ ಸ್ವಾಧೀನದಲ್ಲಿದ್ದು, ವಾದಿಗಳು ಮತ್ತು ಪ್ರತಿವಾದಿಗಳ ನಡುವೆ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ವಿಭಾಗ ಆಗಿಲ್ಲದಿದ್ದರೂ ಸಹ ತಾವು ನ್ಯಾಯಾಲಯಕ್ಕೆ ಸುಳ್ಳು ಸಾಕ್ಷ್ಯ ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದೇ ವಿಭಾಗ ಆಗಿಲ್ಲದ ಕಾರಣ 5 ಮತ್ತು 6 ನೇ ಪ್ರತಿವಾದಿಗೆ ದಾವಾ ಸ್ವತ್ತುಗಳಲ್ಲಿ ಭಾಗ ಕೊಟ್ಟಿಲ್ಲ ಎಂದರೆ ಸಾಕ್ಷಿಯು ಅವರು ಬಂದರೆ ಭಾಗ ಕೊಡುತ್ತೇವೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು ಅದು ಚಿಕ್ಕಣ್ಣನವರ ಮರಣ ಪ್ರಮಾಣ ಪತ್ರ ಆಗಿದ್ದು ಸಾಕ್ಷಿಯ ಒಪ್ಪಿಗೆಯ ಮೇರೆಗೆ ಅದನ್ನು **ನಿಪಿ 39** ಎಂದು ಗುರುತಿಸಲಾಯಿತು. ತಮ್ಮ ತಾತನವರು 1983 ರಲ್ಲಿ ಮರಣ ಹೊಂದಿರುತ್ತಾರೆ ತಾವು ಹೇಳಿರುವ ಹಾಗೆ 1965 ರಲ್ಲಿ ವಿಭಾಗ ಆಗಿದೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**